ಆ) ಮನೆಮನೆಯಿಂದ, ಅಂಗಡಿ ಅಂಗಡಿಯಿಂದ ಕಸವನ್ನು ಸಂಗ್ರಹಿಸಿ ಸಾಗಿಸುವ ಕಾರ್ಯವನ್ನು ಕೆಲವು ರಸ್ತೆ ಸ್ಥಳಗಳಲ್ಲಿ ಅಳವಡಿಸಲಾಗಿದೆ. ನಗರಪಾಲಿಕೆ ಸದಸ್ಯರು ಸ್ಥಳೀಯ ನಾಯಕರು, ಸ್ವಯಂ ಸೇವಾ ಸಂಘಗಳ ಮತ್ತು ವ್ಯಾಪಾರಿ ಸಂಘಗಳ ಮತ್ತು ವ್ಯಾಪಿ ಸಂಘಗಳಿಂದ ನೆರವೇರಿಸಲಾಗುತ್ತಿದೆ.

ರಸ್ತೆಗಳಲ್ಲಿ ರಸ್ತೆ ಬದಿಯಲ್ಲಿ ಕಸವನ್ನು ಹಾಕುವ ಮತ್ತು ಸ್ವಚ್ಛತೆ ಕಾಪಾಡದಿರುವುದರಿಂದ ಆಡಳಿತಾತ್ಮಕ ವೆಚ್ಚವನ್ನು ವಸೂಲಿಮಾಡಲಾಗುತ್ತಿದೆ.

ಚರಂಡಿ : ಹೂಳೆತ್ತುವ : ಸ್ವಚ್ಛತೆಗೊಳಿಸುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸ್ವಚ್ಛತೆ ಕಾಪಾಡಿಕೊಂಡು ಬರುವಲ್ಲಿ ಸಾರ್ವಜನಿಕರ ಸಹಕಾರವನ್ನು ಕರಪತ್ರಗಳ ಮೂಲಕ ಮತ್ತು ದಿನಪತ್ರಿಕೆಗಳ ಮೂಲಕ ಕೋರಲಾಗುತ್ತಿದೆ.

ಇ) ಹೌದು

ಈ) ಯಾವುದೇ ವಿಶೇಷ ಹಣ ಈ ಉದ್ದೇಶಕ್ಕಾಗಿ ಖರ್ಚು ಮಾಡಿರುವುದಿಲ್ಲ.

ವಿಷಯ : ಪಡಿತರ ಚೀಟಿದಾರರಿಗೆ ಆಹಾರ ಸಾಮಗ್ರಿಗಳ ಪ್ರಮಾಣದಲ್ಲಿ ಕಡಿತ

1499 (2077)-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಪಡಿತರ ಚೀಟಿದಾರರಿಗೆ ನೀಡುತ್ತಿದ್ದ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಕೇಂದ್ರದಿಂದ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಸಾಮಗ್ರಿಗಳನ್ನು ಪಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಈ) ಬೆಂಗಳೂರು ನಗರದಲ್ಲಿ ಶೇಕಡಾ 30 ರಷ್ಟು ಪಡಿತರ ಚೀಟಿದಾರರು ಅಕ್ಕಿ ಗೋಧಿಯನ್ನು ಪಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದಯೇ?

ಉ) ಹಾಗಿದ್ದಲ್ಲಿ ಅದನ್ನು ಪಡೆಯದಿರುವ ಪಡಿತರ ಚೀಟಿದಾರರ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು

ಆ) ಭಾರತ ಸರ್ಕಾರವರು ದಿನಾಂಕ 1-6-97 ರಿಂದ ಜಾರಿಗೆತಂದ ಟಿ.ಪಿ.ಡಿ.ಎನ್. ಯೋಜನೆಯಿಂದಾಗಿ ರಾಜ್ಯಕ್ಕೆ ಸರಬರಾಜಾಗುತ್ತಿದ್ದ ಆಹಾರ ಧಾನ್ಯಗಳ ಹಂಚಿಕೆಯ ಪ್ರಮಾಣವು 1.5 ಲಕ್ಷ ಮೆ.ಟನ್ ನಿಂದ 0.75 ಲಕ್ಷ ಮೆ.ಟನ್‌ಗೆ ಕಡಿತಗೊಳಿಸಲಾಗಿದೆ. ಈ ರೀತಿ ಲಭ್ಯವಿರುವ ಆಹಾರ ಧಾನ್ಯಗಳನ್ನು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲಾ 10 ಕೆ. ಜಿ. ಪ್ರಮಾಣದಂತೆಯೂ ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ತಲಾ 2 1/2 ಕೆ.ಜಿ. ಯಂತೆಯು ವಿತರಿಸಲಾಗುತ್ತಿದೆ.

ಇ) ರಾಜ್ಯ ಸರ್ಕಾರವು ಆಹಾರ ಧಾನ್ಯಗಳ ಹಂಚಿಕೆಯ ಪ್ರಮಾಣವನ್ನು ಪ್ರತಿ ತಿಂಗಳಿಗೆ 75,000 ಮೆ.ಟನ್ ನಿಂದ 1,20,000ಮೆ. ಟನ್‌ಗಳಿಗೆ ಹೆಚ್ಚಿಸುವಂತೆ ಭಾರತ ಸರ್ಕಾರಕ್ಕೆ ಮನವಿ ಮಾಡಿದೆ.

ಈ) ಇಲ್ಲ.

1997ರ ಜೂನ್ ಮಾಹೆಗೆ ಬೆಂಗಳೂರ ಅನೌಪಚಾರಿಕ ಪಡಿತರ ಪ್ರದೇಶಕ್ಕಾಗಿ 5,938 ಮೆ.ಟನ್ ಅಕ್ಕಿಯನ್ನು ಮತ್ತು 1,648 ಮೆ.ಟನ್ ಗೋಧಿಯನ್ನು ಹಂಚಿಕೆಮಾಡಲಾಗಿದೆ. ಎತ್ತುವಳಿಯಾದ ಪ್ರಮಾಣ ಅಕ್ಕಿ 4,625.0 ಮೆ. ಟನ್‌ಗಳನ್ನು ಮತ್ತು ಗೋಧಿ 1116 ಮೆ.ಟನ್‌ಗಳು ಅಂದರೆ ಎತ್ತುವಳಿಯಾದ ಅಕ್ಕಿಯ ಪ್ರಮಾಣ ಶೇ. 77 ರಷ್ಟು ಮತ್ತು ಗೋಧಿ ಪ್ರಮಾಣ ಶೇ. 68ರಷ್ಟು ದಿನಾಂಕ 1-6-97 ರಿಂದ ಪ್ರತಿ ಕಾರ್ಡಿಗೆ ತಿಂಗಳೊಂದಕ್ಕೆ 2 1/2 ಕೆ. ಜಿ. ಅಕ್ಕಿಯನ್ನು ನೀಡಬೇಕೆಂದು ನಿಗಧಿ ಮಾಡಲಾಗಿದ್ದರೂ, 5 ಕೆ.ಜಿ. ಅಕ್ಕಿ ಹಾಗೂ 1 1/2 ಕೆ.ಜಿ. ಗೋಧಿಯನ್ನು ಪ್ರತಿ ಕಾರ್ಡುದಾರರಿಗೆ ಪ್ರತಿ ತಿಂಗಳಿಗೆ ಸಗಟುದಾರರು ಮತ್ತು ಚಿಲ್ಲರೆ ಮಾರಾಟಗಾರರಲ್ಲಿ ಉಳಿದಿರುವ ದಾಸ್ತಾನಿನಲ್ಲಿ ಹಂಚಲಾಗಿದೆ. ಕಡಿಮೆ ಸಂಚಿಕೆಯಾದ ಪ್ರಯುಕ್ತ ಕೆಲವು ಕಾರ್ಡುದಾರರು ಅಕ್ಕಿ ಮತ್ತು ಗೋಧಿಯನ್ನು ಪಡೆದಿಲ್ಲದಿರುವ ಸಾಧ್ಯತೆಯಿದೆ.

ಕಾರ್ಡುದಾರರು ಅಕ್ಕಿ ಮತ್ತು ಗೋಧಿಯನ್ನು ತೆಗೆದುಕೊಳ್ಳದಿದ್ದರೂ ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ತೆಗೆದುಕೊಳ್ಳಬಹುದು. ಅಂತಹ ಕಾರ್ಡುದಾರರಿಗೆ ಸಕ್ಕರೆ ಸೀಮೆಎಣ್ಣೆಯನ್ನು ಮಾತ್ರ ಕೊಡುವ ಬಗ್ಗೆ ಯೋಚಿಸಲಾಗುತ್ತಿದೆ.